# ಜಾಣರ ಪೆಟ್ಟಿಗೆ

**ವಾರದ ಪತ್ರ**

## ಮೋಡಿ ಮಾಡಿದ 'ನಿನಗಾಗಿ' ಜಡೆ

ಕಲರ್ಸ್ ಕನ್ನಡದ 'ನಿನಗಾಗಿ' ಧಾರಾವಾಹಿಯ ನಾಯಕನ ಮಗಳಾದ ಕೃಷ್ಣಾಳಿಗೆ (ಸಿರಿ ಸಿಂಚನಾ) ಹಾಕಿದ ಜೋಡಿ ಜುಟ್ಟಿನ ಕೇಶವಿನ್ಯಾಸಕ್ಕೆ ಮರುಳಾದ ನನ್ನ ನಾದಿನಿಯ ಐದು ವರ್ಷದ ಮಗಳು ವರ್ಣಿಕಾ, ಕೃಷ್ಣಾಳಿಗೆ ಹಾಕಿದ ಜೋಡಿ ಜುಟ್ಟನ್ನು ಹಾಕಿದರೆ ಮಾತ್ರ ಶಾಲೆಗೆ ಹೋಗುತ್ತೇನೆ ಎಂದು ಹಟ ಮಾಡುತ್ತಿದ್ದಳು. ವರ್ಣಿಕಾಳ ಹಟ ನೋಡಿ, ಕೆಲವು ದಶಕಗಳ ಹಿಂದೆ ಕೇಶವಿನ್ಯಾಸಕ್ಕೆ ಪ್ರಖ್ಯಾತರಾಗಿದ್ದ ನಟಿ ಸಾಧನಾ ಕಟ್, ನಟ ರಾಜೇಶ್ ಖನ್ನಾ ಹೇರ್ ಸ್ಟೈಲ್ ನೆನಪಾಯ್ತು ಹಾಗೂ ದೃಶ್ಯ ಮಾಧ್ಯಮದ ಪ್ರಭಾವ ಎಷ್ಟು ತೀಕ್ಷ್ಣವಾದದು ಎನ್ನುವ ಸೂಕ್ಷ್ಮ ತಿಳಿಯಿತು.

—ಸೌಮ್ಯ ಶಿಗ್ಗಾಂವಕರ್, ಹಾಸನ

## ಕೌಟುಂಬಿಕ ವ್ಯವಸ್ಥೆಯ ಮೇಲೆ ದುಷ್ಪರಿಣಾಮ

ಧಾರಾವಾಹಿಗಳನ್ನು ಅನುಸರಿಸುವ ಮುಗ್ಧತೆಯೂ ಕೆಲವು ವೀಕ್ಷಕರಲ್ಲಿ ಇದೆ. ಹಾಗಿರುವಾಗ ಊಟದಲ್ಲಿ ವಿಷ ಬೆರೆಸುವ, ದಾರಿಗೆ ಎಣ್ಣೆ ಸುರಿದು ಬೀಳಿಸುವ, ಗರ್ಭಪಾತ ಮಾಡಿಸುವ ಮನೆಹಾಳು ಕೆಲಸವನ್ನು ಧಾರಾವಾಹಿಗಳಲ್ಲಿ ತೋರಿಸುವುದು ಆತಂಕ ಉಂಟುಮಾಡುತ್ತದೆ.

ಧಾರಾವಾಹಿಗಳಲ್ಲಿ ವಿವಾಹಿತ ಹೆಣ್ಣುಮಕ್ಕಳು ಮದುವೆಯಾದ ತವರಿನಲ್ಲಿಯೇ ಕುಳಿತು, ಮನೆಗೆ ಬಂದಿರುವ ಸೊಸೆಯನ್ನು ಹಿಂಸಿಸುವುದು ಸರ್ವೇಸಾಮಾನ್ಯವಾಗಿದೆ. ಬಹುಶಃ ಈ ಕಾರಣಕ್ಕಾಗಿಯೇ ಇಂದಿನ ಹೆಣ್ಣುಮಕ್ಕಳನ್ನು ಅತ್ತಿಗೆ, ನಾದಿನಿ ಇರುವ ಮನೆಗಳಿಗೆ ಮಗಳನ್ನು ಕೊಡಲು ಹಿಂದೇಟು ಹಾಕುತ್ತಿದ್ದಾರೆ.

—ಶ್ರುತಿ ಎಸ್., ಬೆಂಗಳೂರು

## ಅರಮನೆಯಲ್ಲಿ ಜ್ಞಾನ ದಸರಾ

ದಸರಾ ಸಂದರ್ಭದಲ್ಲಿ ಚಂದನ ವಾಹಿನಿ 'ಥಟ್ ಅಂತ ಹೇಳಿ' ಕಾರ್ಯಕ್ರಮವನ್ನು ಮೈಸೂರಿನಲ್ಲಿ ನಡೆಸಿದ್ದು ಸಂದರ್ಭೋಚಿತವಾಗಿತ್ತು. ನಿರೂಪಕ ನಾ. ಸೋಮೇಶ್ವರ ಅಲ್ಲಿ ನೆರೆದಿದ್ದ ಪ್ರೇಕ್ಷಕರಿಗೆ ಮೈಸೂರು ಇತಿಹಾಸದ ಬಗ್ಗೆ ಪ್ರಶ್ನೆ ಕೇಳುತ್ತಿದ್ದರು. ಮೈಸೂರು ಸಂಸ್ಥಾನವನ್ನು ಆಳಿದ ಒಡೆಯರು, ಅರಮನೆಗಳು, ಮಹಿಷ ಮಂಡಲ, ಮೈಸೂರಾಗಿರುವುದು, ನವರಾತ್ರಿಗೆ ಸಂಬಂಧಿಸಿದಂತೆ ರೂಪಿಸಿದ ಪ್ರಶ್ನಾವಳಿ ಉಪಯುಕ್ತ ಎಂದೆನಿಸಿತು.

—ಭಾರತೀ ಗಂಗಾಧರ್, ಬೆಂಗಳೂರು

## ವೈವಿಧ್ಯಗಳ 'ಥಟ್ ಅಂತ ಹೇಳಿ'

ಚಂದನ ವಾಹಿನಿಗೆ ಮುಕುಟಪ್ರಾಯವಾದ 'ಥಟ್ ಅಂತ ಹೇಳಿ' ವಿಭಿನ್ನ ಕಾರ್ಯಕ್ರಮಗಳ ಮೂಲಕ ಮತ್ತೆ ಮತ್ತೆ ಗಮನಸೆಳೆಯುತ್ತಿದೆ. ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ವಿದುರಾಶ್ವತ್ಥದ ಸುಂದರ ಪರಿಸರದಲ್ಲಿ ಶಾಲಾ ಮಕ್ಕಳಿಗಾಗಿ ಕಾರ್ಯಕ್ರಮ ಆಯೋಜಿಸಿದ್ದರು. ನಂತರ ಹೋರಾಟಗಾರ್ತಿ ಅಕ್ಕಯ್ ಪದ್ಮಶಾಲಿ ಅವರ ವಿಶೇಷ ಕಾರ್ಯಕ್ರಮ ಕುತೂಹಲಕಾರಿಯಾಗಿತ್ತು. ಗಾಂಧಿ ಜಯಂತಿ ಸಂದರ್ಭದಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ಸ್ವಚ್ಛತಾ ಸಿಬ್ಬಂದಿ ಜೊತೆ ಕಾರ್ಯಕ್ರಮ ನೀಡಿದರು. ಇತ್ತೀಚೆಗೆ ರೂಪಿಸಿದ್ದ ಡಾ. ಗೌರಿ ಸುಬ್ರಹ್ಮಣ್ಯ ಅವರ ಪಾರಂಪರಿಕ ವೈದ್ಯಕೀಯ ಕುರಿತ ವಿಶೇಷ ಸಂಚಿಕೆ ಉತ್ತಮ ಸಂದೇಶ ನೀಡಿತು.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ನಟನೆಯ ಅಮೂಲ್ಯ ವಜ್ರ

ಕಲರ್ಸ್ ಕನ್ನಡ ವಾಹಿನಿಯಲ್ಲಿ ನವರಾತ್ರಿ ಉತ್ಸವದ ವೇಳೆ 'ಕೊಲ್ಲೂರ ಶ್ರೀಮೂಕಾಂಬಿಕಾ' ಸಿನಿಮಾ ಪ್ರಸಾರ ಮಾಡಿದ್ದು ಅರ್ಥಪೂರ್ಣವಾಗಿತ್ತು. ರಾಜ್‌ಕುಮಾರ್ ಅವರಿಗೆ ಬಂಧು–ವೈರಿಯ ಅನೇಕ ಪಾತ್ರಗಳಲ್ಲಿ 'ನಟಭಯಂಕರ' ವಜ್ರಮುನಿ ನಟಿಸಿದ್ದಾರೆ. ಮೂಕಾಸುರ ಪಾತ್ರದಲ್ಲಿ ಅವರ ಅಟ್ಟಹಾಸದ ನಗು, ದೇವಿ ಶಾಪದಿಂದ ಮೂಕನಾಗಿ ಅಸಹಾಯಕ ಸ್ಥಿತಿಯ ಅಭಿನಯ ನೋಡಿ ರೋಮಾಂಚನವಾಯಿತು.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ



## ನಿದ್ದೆಯಲ್ಲೂ ತಾಳಿ ಪ್ರದರ್ಶನ!

ಸರಗಳ್ಳತನ ಪ್ರಕರಣಗಳು ದಿನೇದಿನೇ ಹೆಚ್ಚಾಗುತ್ತಿವೆ. ದಿನವೂ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುವ ಇಂತಹ ಸುದ್ದಿಗಳು ಆತಂಕವನ್ನು ಸೃಷ್ಟಿಸುತ್ತವೆ. ಹೀಗಿದ್ದರೂ ಅನೇಕರು ತಮ್ಮಲ್ಲಿರುವ ಬಂಗಾರದ ಆಭರಣಗಳನ್ನು ಪ್ರದರ್ಶನ ಮಾಡುತ್ತಾರೆ. ಅದಕ್ಕೆ ಟೀವಿಗಳು ಪ್ರಚೋದನೆಯನ್ನು ನೀಡುತ್ತಿವೆ. ಕಲರ್ಸ್ ಕನ್ನಡದ 'ಲಕ್ಷ್ಮೀ ಬಾರಮ್ಮ' ಧಾರಾವಾಹಿಯಲ್ಲಿ ನಿದ್ದೆಯಲ್ಲೂ ಲಕ್ಷ್ಮಿ ತನ್ನ ತಾಳಿ ಸರವನ್ನು ತೋರಿಸುತ್ತಿದ್ದಾರೆ.

ಮನೆಯಲ್ಲಿ ಲಕ್ಷ್ಮಿ ಮಲಗಿದ್ದಾಗ ಮುಸುಕುಧಾರಿ ಕೊಲೆ ಮಾಡಲು ಬಂದಾಗ ತಾಳಿಸರ ರಾರಾಜಿಸುವುದು ಕಾಣಿಸುತ್ತದೆ. ಮಲಗಿದಾಗ ಕೊರಳಲ್ಲಿನ ಸರ ಯಾವುದೋ ಒಂದು ಕಡೆ ಜರುಗಿರುತ್ತದೆ. ಈ ಸೂಕ್ಷ್ಮ ನಿರ್ದೇಶಕರಿಗೆ ತಿಳಿಯಲಿಲ್ಲವೆ?

—ಅನುರಾಧ ಟಿ., ದಾವಣಗೆರೆ

## ಹಾಸ್ಯದ ಹೆಸರಿನಲ್ಲಿ ಏನೆಲ್ಲ ಚೇಷ್ಟೆ

ಉದಯ ಕಾಮಿಡಿಯ ಕಾರ್ಯಕ್ರಮ ಹಾಸ್ಯಾಸ್ಪದವಾಗಿರುತ್ತದೆ. ಆ ವಾಹಿನಿಯ 'ಕ್ಲಾಸಿಕ್ ಕಾಮಿಡಿ', 'ಕಿಲಾಡಿ ಜೋಡಿ' ಕಾರ್ಯಕ್ರಮಗಳನ್ನು ನಡೆಸಿಕೊಡುವವರು ವಿಪರೀತ ಚೇಷ್ಟೆ ಮಾಡುತ್ತಾರೆ. ಹಾಸ್ಯ ಎನ್ನುವುದಕ್ಕಿಂತ ಅದನ್ನು ಅಪಹಾಸ್ಯ ಎಂದು ಕರೆಯುವುದು ಸೂಕ್ತ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಚಂದನದ ದಸರೆಗೆ ಅಭಿನಂದನೆ

ಚಂದನದಲ್ಲಿ ಮೈಸೂರು ದಸರಾ ಜಂಬೂಸವಾರಿಯ ನೇರ ಪ್ರಸಾರ ಮಾಡಿದ್ದು ಶ್ಲಾಘನೀಯ. ಮಳೆಯಲ್ಲಿಯೂ ನೆರೆದಿದ್ದ ಜನಸ್ತೋಮ ಕಂಡು ಮೂಕವಿಸ್ಮಿತನಾದೆ. ಸ್ತಬ್ಧಚಿತ್ರಗಳ ಮೆರವಣಿಗೆ ತುಂಬಾ ಸೊಗಸಾಗಿತ್ತು. ಆದರೆ ನಿರೂಪಣೆ ಮಾಡಿದ ಇಬ್ಬರಲ್ಲೂ ತುಂಬಾ ಗೊಂದಲವಿದ್ದಹಾಗಿತ್ತು. ಪ್ರಸಾರ ಮಾಡುತ್ತಿದ್ದ ಚಿತ್ರಕ್ಕೂ, ನೀಡುತ್ತಿದ್ದ ವಿವರಣೆಗೂ ತಾಳೆ ಆಗುತ್ತಿರಲಿಲ್ಲ. ನಿರಂತರವಾಗಿ ಬರುತ್ತಿದ್ದ ಜಾಹೀರಾತುಗಳು ಇದು ಚಂದನ ವಾಹಿನಿಯೋ ಅಥವಾ ಖಾಸಗಿ ವಾಹಿನಿಯೋ ಎಂಬ ಗೊಂದಲ ಮೂಡಿಸುತ್ತಿತ್ತು. ಇಂತಹ ನ್ಯೂನತೆಗಳಿದ್ದರೂ ಸಮಸ್ತ ಕನ್ನಡಿಗರಿಗೆಲ್ಲ ಮನೆಯಲ್ಲಿಯೇ ಕುಳಿತು ಜಗದ್ವಿಖ್ಯಾತ ಮೈಸೂರು ದಸರಾ ಮಹೋತ್ಸವದ ನೇರಪ್ರಸಾರವನ್ನು ನೋಡುವ ಭಾಗ್ಯ ಕರುಣಿಸಿದ ಚಂದನ ವಾಹಿನಿಗೆ ಧನ್ಯವಾದಗಳು.

—ಎಸ್.ವಿ. ಗೋಪಾಲ್ ರಾವ್, ದಾವಣಗೆರೆ